**ಇಂದು ದಿನಾಂಕ*:26.11.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲು : ವಾದಿ ಪರ ಶ್ರೀ. ಜಿ.ಜಿ. ವಕೀಲರಿಂದಃ</u>**

ನನ್ನ ತಂದೆ ಭೂತನಹಳ್ಳಿ ಗ್ರಾಮದವರು. ನನ್ನ ತಂದೆ 50 ವರ್ಷಗಳವರೆಗೆ ಅದೇ ಊರಿನಲ್ಲಿ ಇದ್ದರು. ಭೂತನಹಳ್ಳಿಯಲ್ಲಿರುವ ಒಂದು ಮನೆ ಹೊರತುಪಡಿಸಿ ಉಳಿದೆಲ್ಲ ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳು. ಸ.ನಂ.40/10 ರಲ್ಲಿ 1 ಎಕರೆ 30 ಗುಂಟೆ ನಮ್ಮ ತಂದೆಗೆ ಮಂಜೂರಾಗಿತ್ತು. ಸ.ನಂ.24/P3 ರಲ್ಲಿ ನನ್ನ ತಂದೆ ಜಮೀನು ಖರೀದಿಸಿದ್ದಾರೆ. ನನ್ನ ತಂದೆ ದಿನಸಿ ವ್ಯಾಪಾರ ಮಾಡುತ್ತಿದ್ದಾರೆಂದು ತೋರಿಸಲು ದಾಖಲೆ ಇರುವುದಿಲ್ಲ.

ನಮ್ಮ ತಂದೆ ಹಳ್ಳಿ ಪ್ರದೇಶದಿಂದ ದಿನಸಿ ಖರೀದಿಸಿದ ಪಿರಿಯಾಪಟ್ಟಣದ ಶಾಂತಪ್ಪ ಮತ್ತು ಪುಟ್ಟಪ್ಪನವರಿಗೆ ಮಾರಾಟ ಮಾಡುತ್ತಿದ್ದರು. ನಮ್ಮ ತಂದೆ ಲಾರಿ ಇಟ್ಟುಕೊಂಡಿರಲಿಲ್ಲ ಎತ್ತಿನ ಗಾಡಿ ಇಟ್ಟುಕೊಂಡಿದ್ದರು. ದಿನಸಿಗಳನ್ನು ಮಾರಾಟ ಮಾಡಿದಾಗ ರಶೀದಿಗಳನ್ನು ಕೊಡುತ್ತಾರೆ ಎಂದರೆ ಆಗ ಯಾರು ರಶೀದಿ ಕೊಡುತ್ತಿರಲಿಲ್ಲ. ಇಷ್ಟು ಮೊತ್ತಕ್ಕೆ ದಿನಸಿ ಮಾರಾಟ ಮಾಡಿದ್ದಾರೆ ಎಂದು ಚೀಟಿ ಕೊಡುತ್ತಿರಲಿಲ್ಲ. ನನ್ನ ತಂದೆ ಪಿರಿಯಾಪಟ್ಟಣದಲ್ಲಿ ದಿನಸಿ ಮಾರಾಟ ಮಾಡುತ್ತಿರುವ ಬಗ್ಗೆ ದಾಖಲೆ ಇರುವುದಿಲ್ಲ.

ನನ್ನ ತಂದೆ ದಿನಸಿ ವ್ಯಾಪಾರ ಮಾಡುತ್ತಿರಲಿಲ್ಲ ವ್ಯವಸಾಯ ಮಾತ್ರ ಮಾಡುತ್ತಿದ್ದರು ಎಂದರೆ ಸುಳ್ಳು. ನಮ್ಮ ತಂದೆ ದಿನಸಿ ವ್ಯಾಪಾರ ಮಾಡುತ್ತಿದ್ದುದನ್ನು ನಮ್ಮ ಊರಿನಲ್ಲಿ ಎಲ್ಲಾರೂ ನೋಡಿದ್ದಾರೆ. ಅವರ ಹೆಸರು ಹೇಳಲು ಗೊತ್ತಿಲ್ಲ. ಒಂದು ವರ್ಷದಲ್ಲಿ ಎಷ್ಟು ಲಕ್ಷ ರೂಪಾಯಿ ದಿನಸಿ ವ್ಯಾಪಾರ ಮಾಡುತ್ತಿದ್ದರು ಎಂದು ಗೊತ್ತಿಲ್ಲ. ನನ್ನ ತಂದೆ ಒಂದು ವರ್ಷಕ್ಕೆ ಎಷ್ಟು ಸಂಪಾದನೆ

ಮಾಡುತ್ತಿದ್ದರು ಎಂದು ನನಗೆ ಹೇಳುತ್ತಿರಲಿಲ್ಲ. ನನ್ನ ತಂದೆ ಜಮೀನು ಖರೀದಿಸಿರುವ ಬಗ್ಗೆ ಕ್ರಯ ಪತ್ರ ಹಾಜರುಪಡಿಸಿದ್ದೇನೆ.

ಸ್ವತ್ತಪ್ಪ ಮತ್ತು ಜಯಮ್ಮರವರಿಂದ ಸ.ನಂ.24/P3 ರಲ್ಲಿ 2 ಎಕರೆ 24 ಗುಂಟೆಯನ್ನು ನನ್ನ ತಂದೆ ಖರೀದಿಸಿದ್ದಾರೆ. ಸ.ನಂ.21/P3 ನನ್ನ ತಂದೆ ಖರೀದಿಸಿದ್ದಾರೆ. ಸ.ನಂ.21/P3 ಮತ್ತು 40/10 ರ ಎರಡೂ ಜಮೀನುಗಳನ್ನು ನನ್ನ ತಂದೆ ದಿನಾಂಕ 23.05.2002 ರಂದು ಭೂತನಹಳ್ಳಿಯ ದೊಡ್ಡತಮ್ಮೇಗೌಡರ ಮಗ ಕಾಳೇಗೌಡರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಈಗ ಆ ಸ್ವತ್ತುಗಳು ದೊಡ್ಡತಮ್ಮೇಗೌಡರ ಮಗ ಕಾಳೇಗೌಡರ ವಶದಲ್ಲಿದೆ ಎಂದರೆ ಸರಿ.

ನನ್ನ ತಂದೆ ದಿನಾಂಕ 23.05.2002 ರಂದು ಭೂತನಹಳ್ಳಿಯ ದೊಡ್ಡತಮ್ಮೇಗೌಡರ ಮಗ ಅಣ್ಣೇಗೌಡರಿಗೆ 2 ಎಕರೆ 7 ಗುಂಟೆ ಮತ್ತು 17 ಗುಂಟೆ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಎಷ್ಟು ಮೊತ್ತಕ್ಕೆ ಮಾರಾಟ ಮಾಡಿದ್ದಾರೆ ಎಂದು ಮರೆತು ಹೋಗಿದೆ. ಸರ್ಕಾರಕ್ಕೆ ಕಿಮ್ಮತ್ತು ಕಟ್ಟಿದ ಮೇರೆಗೆ ನನ್ನ ತಂದೆಗೆ ಸ.ನಂ.40/10 ರಲ್ಲಿ ಮಂಜೂರಾಗಿತ್ತು ಎಂದರೆ ಸರಿ. 5 ಜಮೀನುಗಳನ್ನು ಬಿಟ್ಟರೆ ನನ್ನ ತಂದೆಗೆ ಬೇರೆ ಜಮೀನುಗಳು ಇರಲಿಲ್ಲ ಎಂದರೆ ಸರಿ. ನನ್ನ ತಂದೆಗೆ ಯಾವುದೇ ಸ್ವಯಾರ್ಜಿತ ಜಮೀನು ಇರಲಿಲ್ಲ ಪಿತ್ರಾರ್ಜಿತ ಆಸ್ತಿ ಮಾತ್ರ ಇತ್ತು ಎಂದರೆ ಸುಳ್ಳು. ನನ್ನ ತಂದೆಗೆ ಭೂತನಹಳ್ಳಿಯಲ್ಲಿ ಬ್ಯಾರನ್ ಮನೆ ಇರುವುದಿಲ್ಲ.

ಭೂತನಹಳ್ಳಿಯಲ್ಲಿದ್ದ ಎಲ್ಲಾ ಜಮೀನುಗಳನ್ನು ಮಾರಾಟ ಮಾಡಿ ಕಂಪಲಾಪುರದಲ್ಲಿ ಸ.ನಂ.340/1A ರಲ್ಲಿ 3 ಎಕರೆ 22 ಗುಂಟೆ, ಸ.ನಂ.341/2 ರಲ್ಲಿ 2 ಎಕರೆ 21 ಗುಂಟೆ, ಸ.ನಂ.41/2A ರಲ್ಲಿ 2 ಎಕರೆ 21 ಗುಂಟೆ, ಸ.ನಂ.367/1 ರಲ್ಲಿ 2 ಎಕರೆ 31 ಗುಂಟೆಯನ್ನು ನನ್ನ ತಂದೆ ಖರೀದಿಸಿದ್ದಾರೆ ಎಂದರೆ ಸರಿ. ಆ ರೀತಿ ಖರೀದಿಸಲು ನಾನು ವಾದಿ ಮತ್ತು ಪ್ರತಿವಾದಿ 2

ರವರೆಲ್ಲರೂ ಸೇರಿ ಒಟ್ಟಾಗಿ ಖರೀದಿಸಿದ್ದೇವೆ ಎಂದರೆ ಸರಿಯಲ್ಲ. ಎಷ್ಟು ಮೊತ್ತಕ್ಕೆ ಅದನ್ನು ಖರೀದಿಸಿದ್ದಾರೆ ಎಂದು ನನ್ನ ತಂದೆ ನನಗೆ ತಿಳಿಸಿಲ್ಲ. ಅದನ್ನು ನನ್ನ ತಂದೆಯೇ ಖರೀದಿಸಿದ್ದಾರೆ. ಆ ಜಮೀನುಗಳನ್ನು ಖರೀದಿಸುವ ಮೊದಲು ಜಮೀನುಗಳ ಬಳಿ ಹೋಗಿಲ್ಲ ಆ ನಂತರ ಹೋಗಿದ್ದೇನೆ. ಜಮೀನುಗಳನ್ನು ನೊಂದಾಯಿಸುವ ಕಾಲಕ್ಕೆ ಉಪನೊಂದಣಾಧಿಕಾರಿ ಕಚೇರಿಗೆ ಹೋಗಿಲ್ಲ. ಕಂಪಲಾಪುರದ ಜಮೀನುಗಳನ್ನು ಯಾರಿಂದ ಖರೀದಿಸಿದ್ದಾರೆ ಎಂದು ಗೊತ್ತಿಲ್ಲ.

ನನ್ನ ತಂದೆ ತೀರಿಕೊಳ್ಳುವ 2 ತಿಂಗಳ ಮುಂಚೆ ನನ್ನ ಜೊತೆ ಇದ್ದರು ಎಂದರೆ ಸರಿಯಲ್ಲ. ನನಗೆ ಮೈಸೂರಿನಲ್ಲಿ ಒಂದು ಅಂತಸ್ತಿನ ಒಂದೇ ಮನೆ ಇದೆ. ಅದೇ ಮನೆಯ ಹಿಂದೆ ಒಂದು ಮನೆ ಕಟ್ಟಿದ್ದೇನೆ ಎಂದರೆ ಸರಿ ಅದನ್ನು ಬಾಡಿಗೆಗೆ ಕೊಟ್ಟಿಲ್ಲ. ನಾನು ಮನೆ ಕಟ್ಟಿರುವ ವಿಚಾರವನ್ನು ನನ್ನ ತಂಗಿಗೆ ತಿಳಿಸಿಲ್ಲ ಎಂದರೆ ಸುಳ್ಳು. ಮನೆ ಹೊರತುಪಡಿಸಿ ಉಳಿದೆಲ್ಲ ಜಮೀನುಗಳನ್ನು ನನ್ನ ತಂದೆ ಖರೀದಿಸಿರುವುದಾಗಿ ನನ್ನ ಲಿಖಿತ ಹೇಳಿಕೆಯಲ್ಲಿ ಬರೆಸಿದ್ದೇನೆ.

ಭೂತನಹಳ್ಳಿಯಲ್ಲಿ ಒಂದು ಮನೆ ಹೊರತುಪಡಿಸಿ ಸ.ನಂ.10/2 ನನ್ನ ತಂದೆಗೆ ಭೂ ನ್ಯಾಯಮಂಡಳಿಯಿಂದ ಮಂಜೂರಾಗಿದೆ. ಸ.ನಂ.10/2 ಆದೇಶದ ಪ್ರತಿವಾದಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. 1 ಎಕರೆ 30 ಗುಂಟೆಗೆ ಮಾತ್ರ ಸಂಬಂಧಿಸಿದಂತೆ ದಾಖಲೆಯನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಬ್ಯಾಂಕ್ ವ್ಯವಹಾರ ಮಾಡುತ್ತಿರಲಿಲ್ಲ. ಆ ಸಮಯದಲ್ಲಿ ನನ್ನ ತಂದೆಯ ಬಳಿ ಎಷ್ಟು ಹಣ ಇತ್ತು ಎಂದು ನನಗೆ ಗೊತ್ತಿರಲಿಲ್ಲ.

ನನ್ನ ತಂದೆಗೆ ಯಾವುದೇ ಸ್ವಯಾರ್ಜಿತ ಆಸ್ತಿ ಇರಲಿಲ್ಲ ಎಲ್ಲಾ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸುಳ್ಳು. ವ್ಯವಸ್ಥಾ ಪತ್ರದಲ್ಲಿರುವ ವಿಷಯಗಳನ್ನು ತಿಳಿದುಕೊಂಡಿದ್ದೇನೆ. ನನ್ನ ತಂದೆ ಬರವಣಿಗೆ

ಮೂಲಕ ನಮ್ಮೆಲ್ಲರಿಗೂ ವ್ಯವಸ್ಥಾ ಪತ್ರದ ಮೂಲಕ ಭಾಗ ಮಾಡಿಕೊಟ್ಟಿದ್ದಾರೆ. ವ್ಯವಸ್ಥಾ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಕಾಮನಹಳ್ಳಿ ಸ.ನಂ.61/4 ರಲ್ಲಿ 18 ಗುಂಟೆ 2 ನೇ ಪ್ರತಿವಾದಿಗೆ ವ್ಯವಸ್ಥಾ ಪತ್ರದ ಮೂಲಕ ಕೊಟ್ಟಿದ್ದಾರೆ. ಭೂತನಹಳ್ಳಿಯಲ್ಲಿರುವ ಆಸ್ತಿಗಳನ್ನು ಮಾರಾಟ ಮಾಡಿ ಕಂಪಲಾಪುರದಲ್ಲಿ ಆಸ್ತಿಗಳನ್ನು ಖರೀದಿಸಿರುವುದಾಗಿ ವಿಭಾಗ ಪತ್ರದಲ್ಲಿ ಬರೆಯಲಾಗಿದೆ ಎಂದರೆ ಸರಿ. 2008 ರಲ್ಲಿ ವಿಭಾಗ ಪತ್ರ ಆಗಿದೆ. ವಿಭಾಗ ಪತ್ರಕ್ಕೆ ನನ್ನ ತಂದೆ, ನಾನು ಹಾಗೂ ಸಾಕ್ಷಿದಾರರು ಸಹಿ ಮಾಡಿದ್ದಾರೆ. ವಿಭಾಗ ಪತ್ರಕ್ಕೆ ವಾದಿ, 2 ನೇ ಪ್ರತಿವಾದಿ ಮತ್ತು ಮೃತ ಮಹದೇವ ಸಹಿ ಹಾಕಿಲ್ಲ.

ವ್ಯವಸ್ಥಾ ಪತ್ರ ಬರೆದುಕೊಡಲು 2 ನೇ ಪ್ರತಿವಾದಿ ಸಮ್ಮತಿ ಪತ್ರ ಬರೆದುಕೊಟ್ಟಿಲ್ಲ. ಸ.ನಂ.108 ಸಣ್ಣೇಗೌಡರಿಗೆ ಸೇರಿತ್ತು, ಅದಕ್ಕೆ ಸಂಬಂಧಪಟ್ಟ ದಾಖಲೆ ಹಾಜರುಪಡಿಸಿದ್ದೇನೆ. ನಮ್ಮ ಅಣ್ಣ ಸುಮಾರು 45 ವರ್ಷಗಳ ಹಿಂದೆ ಭೂತನಹಳ್ಳಿ ಬಿಟ್ಟಿದ್ದಾರೆ ಎಂದರೆ ಸರಿ. ಜಮೀನಿನ ವ್ಯವಹಾರದಲ್ಲಿ 2 ನೇ ಪ್ರತಿವಾದಿ ಭಾಗಿಯಾಗಿಲ್ಲ ಎಂದರೆ ಸರಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಭಾಗಿಯಾಗಿಲ್ಲ. ಸ.ನಂ.108 ಜಮೀನನ್ನು ಮಾರಾಟ ಮಾಡಿ ಮನೆ ಕಟ್ಟಿರುವುದಾಗಿ ವಿಭಾಗ ಪತ್ರದಲ್ಲಿ ಬರೆಯಲಾಗಿದೆ. ವಿಭಾಗ ಪತ್ರದಲ್ಲಿ 2 ನೇ ಪ್ರತಿವಾದಿ, ನನ್ನ ಅಕ್ಕ ಹಾಗೂ ಲೇಟ್ ಮಹದೇವರವರಿಗೆ ಹಿಸ್ಸೆ ಕೊಟ್ಟಿಲ್ಲ.

ನನ್ನ ತಂದೆಯೊಬ್ಬರೆ ವಿಭಾಗ ಪತ್ರ ಮಾಡಿಕೊಟ್ಟಿರುವುದಾಗಿ ಪ್ರತಿವಾದಿ 4 ಮತ್ತು 5 ರವರಿಗೆ ಬಾಧ್ಯಗೊಳಿಸುವುದಿಲ್ಲ ಎಂದರೆ ಸರಿಯಲ್ಲ. ಕಂಪಲಾಪುರದಲ್ಲಿರುವ ಆಸ್ತಿಗಳನ್ನು ವಿಭಾಗ ಪತ್ರದಲ್ಲಿ ಕಾಣಿಸಲಾಗಿದೆ. ದಾವಾ ಆಸ್ತಿಗಳು ಯಾರಿಗೆ ಸೇರಬೇಕೆಂದು ವಿಭಾಗ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ಆದ್ದರಿಂದ ದಾವಾ ಆಸ್ತಿಗಳು ನನ್ನೊಬ್ಬನ ಆಸ್ತಿಗಳಲ್ಲ ಒಟ್ಟು ಕುಟುಂಬದ ಆಸ್ತಿಗಳು ಎಂದರೆ

ಸುಳ್ಳು. ಕಂಪಲಾಪುರದ ಸ.ನಂ.367/1 ರಲ್ಲಿ 1 ಎಕರೆ 22 ಗುಂಟೆ 4 ನೇ ಪ್ರತಿವಾದಿಗೆ ವ್ಯವಸ್ಥಾ ಪತ್ರದ ಮೂಲಕ ಕೊಟ್ಟಿದ್ದಾರೆ.

ಸ.ನಂ.341/3 ರ ಪೂರ್ವಕ್ಕೆ ಸ.ನಂ.342 ರಲ್ಲಿರುವ ನನ್ನದೇ ಜಮೀನು, ಉತ್ತರಕ್ಕೆ ನಾಗಣ್ಣಾಚಾರಿರವರ ಜಮೀನು, ದಕ್ಷಿಣಕ್ಕೆ ನಂಜಪ್ಪರವರ ಜಮೀನು ಇರುತ್ತದೆ.

ಸ.ನಂ.341/2 ರ ಪಶ್ಚಿಮಕ್ಕೆ ಸ.ನಂ.341/3 ರಲ್ಲಿರುವ ನನ್ನದೇ ಜಮೀನು, ಉತ್ತರಕ್ಕೆ ಮಾದುರಂಗಯ್ಯರವರ ಜಮೀನು, ದಕ್ಷಿಣಕ್ಕೆ ನಂಜಪ್ಪ ಮತ್ತು ಸ್ವಾಮಿರವರ ಜಮೀನು, ಪೂರ್ವಕ್ಕೆ ಸ.ನಂ.367/1 ರಲ್ಲಿರುವ ನನ್ನದೇ ಜಮೀನು ಇರುತ್ತದೆ. ವಿಭಾಗ ಪತ್ರದಲ್ಲಿ ಈ ಸರ್ವೆ ನಂಬರ್ ಗಳು ಮತ್ತು ಚೆಕ್ಕುಬಂಧಿ ಕಾಣಿಸಿವೆ. ಸ.ನಂ.341/3 ರಲ್ಲಿ ನಿಮಗೆ ಜಮೀನು ಕೊಟ್ಟಿದ್ದಾರೆ ಎಂದರೆ ವಿಭಾಗವೇ ಆಗಿಲ್ಲ. ಯಾವ ಉದ್ದೇಶಕ್ಕಾಗಿ ವ್ಯವಸ್ಥಾ ಪತ್ರ ಮಾಡಿದ್ದಾರೆ ಎಂದರೆ ಅದು ನಮ್ಮ ತಂದೆಯ ಇಷ್ಟದಂತೆ ಮಾಡಿದ್ದಾರೆ.

ಪಿತ್ರಾರ್ಜಿತ ಆಸ್ತಿ ಮಾರಾಟ ಮಾಡಿ ಕಂಪಲಾಪುರದ ಆಸ್ತಿಗಳನ್ನು ಖರೀದಿಸಿರುವುದಾಗಿ ವ್ಯವಸ್ಥಾ ಪತ್ರದಲ್ಲಿ ಬರೆಯಲಾಗಿದೆ ಎಂದರೆ ಸುಳ್ಳು. ವಾದಿ ಮತ್ತು 2 ನೇ ಪ್ರತಿವಾದಿಗೆ ಮೋಸ ಮಾಡಬೇಕೆಂದು ನನ್ನ ಚಿತಾವಣೆ ಮೇರೆಗೆ ವ್ಯವಸ್ಥಾ ಪತ್ರವನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸುಳ್ಳು. 2008 ರಲ್ಲಿ ವ್ಯವಸ್ಥಾ ಪತ್ರ ಮಾಡಿದ್ದಾರೆ. ನಾನು ವಿದ್ಯಾಭ್ಯಾಸ ಮಾಡಿಲ್ಲ. ವ್ಯವಸ್ಥಾ ಪತ್ರ ಬರೆದ ದಿನವೇ ನೊಂದಣಿಯಾಗಿದೆ ಆ ಪತ್ರ ನೊಂದಣಿ ಮಾಡಿಸಲು ನಾನು ಕೂಡ ಉಪನೊಂದಣಾಧಿಕಾರಿ ಕಚೇರಿಗೆ ಹೋಗಿದ್ದೆ. ವ್ಯವಸ್ಥಾ ಪತ್ರ ಎಷ್ಟು ಪುಟದಲ್ಲಿ ಬರೆಯಲಾಗಿದೆ ಎಂದು ಗೊತ್ತಿಲ್ಲ.

ವ್ಯವಸ್ಥಾ ಪತ್ರಕ್ಕೆ ನನ್ನ ತಂದೆ ಎಷ್ಟು ಸಹಿ ಹಾಕಿದ್ದಾರೆ ಎಂದು ನಿಖರವಾಗಿ ಗೊತ್ತಿಲ್ಲ. ವ್ಯವಸ್ಥಾ ಪತ್ರಕ್ಕೆ ನಾನು 5 ಕಡೆ ಸಹಿ ಹಾಕಿರಬಹುದು. ವ್ಯವಸ್ಥಾ ಪತ್ರಕ್ಕೆ ಇಬ್ಬರು ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ

ಅವರ ಹೆಸರುಗಳು ಮತ್ತು ಯಾರ ಊರಿನವರು ಎಂದು ನೆನಪಿಲ್ಲ. ಸಾಕ್ಷಿಗಳು ನನಗೆ ಪರಿಚಯವಿರುವುದಿಲ್ಲ. ವ್ಯವಸ್ಥಾ ಪತ್ರವನ್ನು ಪಿರಿಯಾಪಟ್ಟದ ನಾಗರಾಜು ಎಂಬುವರು ಬರೆದಿದ್ದಾರೆ. ಉಪನೊಂದಣಾಧಿಕಾರಿ ಕಚೇರಿಯಲ್ಲಿ ಪತ್ರ ಬರೆದಿದ್ದಾರೆ. ನಾನು ಕೂಡ ಉಪನೊಂದಣಾಧಿಕಾರಿ ಕಚೇರಿಯಲ್ಲಿ ಸಹಿ ಮಾಡಿದ್ದೇನೆ.

**ಮುಂದುವರಿದ ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**